# ಹಿಮಶಿಖರಗಳಿಗೆ ಸುಂದರ ಪ್ರವಾಸ

ಪ್ರವಾಸದ ಹುಚ್ಚಿನ ಪ್ರವಾಸಿಗರು ವಿವಿಧ ದೇಶಗಳ ನೈಸರ್ಗಿಕ ಹಾಗೂ ಮಾನವಕೃತ ಅದ್ಭುತಗಳನ್ನು ಸವಿಯುತ್ತಾರೆ. ಯುರೋಪಿನಲ್ಲಿ, ಅವರು ಪ್ಯಾರಿಸ್‌ನ ಐಫೆಲ್ ಗೋಪುರದ ಬಗ್ಗೆ; ಪೀಸಾದ ವಾಲುಗೋಪುರದ ಬಗ್ಗೆ; ಮಲೇಷಿಯಾದ ಪೆಟ್ರೋನಾಸ್ ಅವಳಿ ಗೋಪುರಗಳ ಬಗ್ಗೆ, ಥೈಲ್ಯಾಂಡ್‌ನ ಚಿನ್ನದ ಬುದ್ಧನ ಬಗ್ಗೆ; ಸಿಂಗಪುರದಲ್ಲಿನ ಸೆಂಟೋಸಾ ದ್ವೀಪದ ಬಗ್ಗೆ; ಆಸ್ಟ್ರೇಲಿಯಾದಲ್ಲಿರುವ ಒಪೇರಾ ಹೌಸ್ ಬಗ್ಗೆ; ಚೀನಾದ ಮಹಾಗೋಡೆಯ ಬಗ್ಗೆ; ಮತ್ತು ರಷ್ಯಾದಲ್ಲಿನ ಕ್ರೆಮ್ಲಿನ್ ಚೌಕದ ಬಗ್ಗೆ ಆಸೆಪಡುತ್ತಾರೆ ಮತ್ತು ಇವು ನಮಗೆ ಆಯಾ ಪ್ರವಾಸಿ ಆಕರ್ಷಣೆಗಳನ್ನು ನೆನಪಿಸುತ್ತವೆ. ಆದರೆ ಈ ವಿಶ್ವದಲ್ಲಿ ಅಂಥ ಒಂದು ಮಹಾನ್ ಖಂಡವಿದೆ. ನಿಜ ಹೇಳಬೇಕೆಂದರೆ ಅದು ಈ ಭೂಗ್ರಹದ ಕೆಳಭಾಗದಲ್ಲಿದೆ; ನಿಜಕ್ಕೂ ಇಲ್ಲಿ ಯಾವುದೇ ರಾಜಧಾನಿ ನಗರವೂ ಇಲ್ಲ, ದೂರದೇಶದ ಕರೆನ್ಸಿಯೂ ಇಲ್ಲ ಅಥವಾ ಯಾವುದೇ ನಿರ್ದಿಷ್ಟ ಭಾಷೆಯೇ ಇಲ್ಲ. ಯಾವುದೇ ಪಾರಂಪರಿಕ ಪ್ರವಾಸಿ ಆಕರ್ಷಣೆಯೂ ಇಲ್ಲ. ಆದರೂ ಸಾವಿರಾರು ಪ್ರವಾಸಿಗರು ತೀವ್ರವಾದ ಕುತೂಹಲದಿಂದ ಈ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಈ ಖಂಡದ ಮೇಲೆ ಯಾವೊಂದು ದೇಶವೂ ತನ್ನ ಹಕ್ಕು ಸಾಧಿಸಲು ಸಾಧ್ಯವಿಲ್ಲ. 1961ರ ಅಂತಾರಾಷ್ಟ್ರೀಯ ಒಪ್ಪಂದದ ಅನ್ವಯ ದಕ್ಷಿಣಾರ್ಧಗೋಳದಲ್ಲಿರುವ ಈ ದೇಶದಲ್ಲಿನ ಋತುಗಳು ನಮಗಿಂತ ತದ್ವಿರುದ್ಧವಾಗಿವೆ. ಇದು ಪ್ರತಿ 24 ಗಂಟೆಗಳ ಹಗಲನ್ನು ಬೇಸಿಗೆಯಲ್ಲೂ ಮತ್ತು ರಾತ್ರಿಯನ್ನು ಚಳಿಗಾಲದಲ್ಲೂ ಹೊಂದಿರುತ್ತದೆ. ಇದು ಪೂರ್ಣವಾಗಿ 90% ಭಾಗ ಮಂಜು ಹಾಗೂ ಜಗತ್ತಿನಲ್ಲಿ ಲಭ್ಯವಿರುವ ಕುಡಿಯುವ ನೀರಿನ 70% ಪ್ರಮಾಣವನ್ನು ಹೊಂದಿದೆ; ಇದು ಅಂಟಾರ್ಟಿಕಾ, ಇದನ್ನು ಕೇವಲ ಸಂಶೋಧನಾ ವಿಜ್ಞಾನಿಗಳು ಅಥವಾ ಗಂಡೆದೆಯ ಸಾಹಸಿ ಪ್ರವಾಸಿಗರು ಹಾಗೂ ನಿರ್ದಯಿ ಸಮುದ್ರಸಿಂಹ ಮತ್ತು ತಿಮಿಂಗಿಲ ಬೇಟೆಗಾರರು ಮಾತ್ರವೇ ಭೇದಿಸಲು ಸಾಧ್ಯವಿತ್ತು. ಆದರೆ ಈಗ ನಮ್ಮ ನಿಮ್ಮಂಥ ಪ್ರವಾಸಿಗರು ಕೂಡ ಸುಲಭವಾಗಿ ತೆರಳುವಂಥ ಸ್ಥಳವಾಗಿದ್ದು, ವಿಶೇಷವಾಗಿ ನವೆಂಬರ್ –ಡಿಸೆಂಬರ್ ತಿಂಗಳುಗಳಲ್ಲಿ ಇಲ್ಲಿಗೆ ಭೇಟಿ ಕೊಡಬಹುದು. ಸದ್ಯಕ್ಕೆ ವಿವಿಧ ದೇಶಗಳನ್ನು ಪ್ರತಿನಿಧಿಸುತ್ತಿರುವ 80 ಸಂಶೋಧನಾ ಸಂಸ್ಥೆಗಳು ಇಲ್ಲಿವೆ.

ಬೀಗಲ್ ಸುರಂಗದ ದಂಡೆಯಲ್ಲಿರುವ ಜಗತ್ತಿನ ಅತ್ಯಂತ ದಕ್ಷಿಣದ ಹಳ್ಳಿ ಎನಿಸಿರುವ ಅರ್ಜೆಂಟೀನಾದ ಉಷುಇಯಾ ಅಂಟಾರ್ಟಿಕಾದ ದ್ವಾರ ಎನಿಸಿದೆ. ಇಲ್ಲಿ ಎಂಟು ಬಗೆಯ ಪೆಂಗ್ವಿನ್‌ಗಳಿದ್ದು, ಅವು ಇಲ್ಲಿನ ಶಾಶ್ವತ ನಿವಾಸಿಗಳಾಗಿದ್ದು ನಮ್ಮನ್ನು ಸ್ವಾಗತಿಸುತ್ತವೆ. 'ಹಾಫ್ ಮೂನ್ ಐಲ್ಯಾಂಡ್' ಎಂಬುದು ಇದೇ ಬಗೆಯ ಮನೆಗಳನ್ನು ಹೊಂದಿದ್ದು ಚಿನ್‌ಸ್ಟ್ರಾಪ್ ಪೆಂಗ್ವಿನ್‌ಗಳ ದೊಡ್ಡ ಕಾಲನಿ ಎನಿಸಿದೆ. ಈ ಕುಳ್ಳ ಪೆಂಗ್ವಿನ್‌ಗಳಲ್ಲಿ ಮೊಟ್ಟೆಗಳನ್ನು ಬೆಚ್ಚಗೆ ಮಾಡುವ ಜವಾಬ್ದಾರಿಯು ಗಂಡು ಹಾಗೂ ಹೆಣ್ಣು ಪೆಂಗ್ವಿನ್‌ಗಳೆರಡರದ್ದೂ ಆಗಿರುತ್ತದೆ. ಕಲ್ಲುಗಳನ್ನು ಗೋಲಾಕಾರದಲ್ಲಿ ಇರಿಸಿ ಗೂಡು ನಿರ್ಮಿಸಿಕೊಳ್ಳುವ ಪೆಂಗ್ವಿನ್‌ಗಳು ಮೊಟ್ಟೆಗಳಿಗೆ ಕಾವು ಕೊಡಲು ವ್ಯವಸ್ಥೆ ಮಾಡಿಕೊಳ್ಳುತ್ತವೆ. ನಿಜಕ್ಕೂ ವಂಚಿಸುವ ಅಂಟಾರ್ಟಿಕಾದಲ್ಲಿನ ಸ್ಥಳ ಎಂದರೆ 'ಡಿಸೆಪ್ಶನ್ ಐಲ್ಯಾಂಡ್'. ಏಕೆಂದರೆ ಇದು ನಿಜಕ್ಕೂ ನಿದ್ರಿಸುವ ಜ್ವಾಲಾಮುಖಿಯಾಗಿದ್ದು ಅಂಟಾರ್ಟಿಕಾದಲ್ಲಿದ್ದರೂ ಸಹ ನೀರನ್ನು ಕುದಿಯುವ ರೂಪದಲ್ಲಿ ಇರಿಸುತ್ತದೆ. ಸಾವಿರಾರು ವರ್ಷಗಳ ಹಿಂದೆ ಒಳಗೇ ಮುರುಟಿದ ಈ ಜ್ವಾಲಾಮುಖಿಯ ದ್ವೀಪವೇ ಇದು. ಇದರ ಬಾಯಿಯಲ್ಲಿನ ಕಡಿದಾದ ಛೇದನವನ್ನು ನೆಪ್ಚೂನ್ ಬಿಲೋಜ್ ಎಂದು ಕರೆಯುತ್ತಾರೆ. ಅಂಟಾರ್ಟಿಕಾದ ಅತೀ ಹೆಚ್ಚು ಫೋಟೋಗ್ರಾಫ್ ಆಗಿರುವ ಸ್ಥಳವೆಂದರೆ, ಅಂಟಾರ್ಟಿಕಾದ ಭೂಮಿ ಹಾಗೂ ಬೂತ್ ದ್ವೀಪದ ನಡುವಿನಲ್ಲಿರುವ 11 ಕಿಮೀ ಉದ್ದವಾಗಿದ್ದು, 5249 ಅಡಿ ಅಗಲವಾಗಿರುವ ಲಿಮಾರ್ ಸುರಂಗ, ಇದನ್ನು ಹೆಚ್ಚಾಗಿ 'ಕೋಡಾಕ್ ಗ್ಯಾಪ್' ಎಂದು ಕರೆಯುತ್ತಾರೆ. ಹಿಲ್ಲಿನ ಹಿಮಶಿಖರಗಳ ಸುಂದರ ಬಣ್ಣಗಳನ್ನು 'ಐಸ್‌ಬರ್ಗ್ ಅಲ್ಲೆ'ಗೆ ಭೇಟಿ ನೀಡಿದ ಬಳಿಕ ಕಾಣಬಹುದು. ಅಂಟಾರ್ಟಿಕಾದ ಪ್ರಾಣಿ ಜಗತ್ತಿನ ಪ್ರತ್ಯೇಕಿಸಲಾಗದ ಭಾಗ ಎಂದರೆ 'ಸೀಲ್' ಅಥವಾ ಸಮುದ್ರಸಿಂಹ. ಇದು ತುಂಬ ಆಕರ್ಷಕವೇನಲ್ಲ. ಇದರ ನಾಲ್ಕು ಕಾಲುಗಳು ಫ್ಲಿಪರ್‌ಗಳಂತಿದ್ದು, ಇದು ಭೂಮಿಯ ಮೇಲೆ ತೆವಳುತ್ತದೆ. ಇದು ಸಮುದ್ರದಲ್ಲಿ ಪರಿಣಾಮಕಾರಿಯಾಗಿ ಈಜುತ್ತದೆ ಮತ್ತು ನೀರಿನ ಅಡಿಯಲ್ಲಿ ಕೂಡ ನಿದ್ರೆ ಮಾಡುತ್ತದೆ. ಹಲವಾರು ಬಗೆಯ ಸೀಲ್‌ಗಳು, ಉದಾಹರಣೆಗೆ ಚಿರತೆಗಳಂತೆ ಕಪ್ಪು ಚುಕ್ಕೆಗಳಿರುವ ಲೆಪಾರ್ಡ್ ಸೀಲ್, ಏಡಿ ತಿನ್ನುವ ಸೀಲ್, ಎಲಿಫಂಟ್ ಸೀಲ್ ಮುಂತಾದವು ಬೇಟೆಗಾರರನ್ನು ಎದುರಿಸಿಯೂ ಜೀವಂತವಿರುವುದನ್ನು ಇಲ್ಲಿ ಕಾಣಬಹುದು.

9 ರಾತ್ರಿಗಳನ್ನು ಕ್ರೂಸ್ ಹಡಗಿನಲ್ಲಿ,
1 ರಾತ್ರಿಯನ್ನು ಉಷುಐಯಾ ಹಳ್ಳಿ ಮತ್ತು
1 ರಾತ್ರಿಯನ್ನು ಬ್ಯೂನಸ್ ಐರಿಸ್‌ನಲ್ಲಿ ಕಳೆಯುವ ಕೇಸರಿಯ ಅಂಟಾರ್ಟಿಕಾ ಜೊತೆ ಪೊಟಗೋನಿಯಾ ಟೂರ್ ಸೇರಿರಿ. ಇದನ್ನು ಕಳೆದುಕೊಳ್ಳಬೇಡಿ, ಇದು ಜಗತ್ತಿನ ಅಚ್ಚರಿಯ ತಾಣಕ್ಕೆ ಅತ್ಯಂತ ಮಹತ್ವದ ಪ್ರವಾಸಾವಕಾಶವಾಗಿದೆ. 1800 22 1100ಗೆ ಕರೆಮಾಡಿರಿ ಮತ್ತು ನಿಮ್ಮ ಸೀಟ್ ಬುಕ್ ಮಾಡಲು ಮುಂದಾಗಿ.

ವೀಣಾ ಪಾಟೀಲ್
ಮ್ಯಾನೇಜಿಂಗ್ ಡೈರೆಕ್ಟರ್–ಕೇಸರಿ




Bengaluru: 4128 2222

KESARI
World Class Travel Company

ಸಂತೋಷದ ರಜಾ ದಿನಗಳು
@
ಸಂತೋಷದ ದರಗಳಲ್ಲಿ!

| ಪ್ರವಾಸ ಹೆಸರು | ದಿನಗಳು | ಕೋಡ್ | ದಿನಾಂಕ | ದರ | ರಿಯಾಯಿತಿ ದರ* |
|---|---|---|---|---|---|
| ಥೈಲ್ಯಾಂಡ್ ಬ್ಯಾಂಕಾಕ್ ಪಟ್ಟಾಯ--- | 5 | QT | 25 ಡಿಸೆಂ | ~~34990~~ | 32990 |
| ಶ್ರೀಲಂಕಾ------------------- | 6 | MC | 25 ಡಿಸೆಂ | ~~38990~~ | 34990 |
| ಸಿಂಗಪುರ್ ಮಲೇಶಿಯಾ-------- | 6 | Q8 | 24 ಡಿಸೆಂ | ~~60990~~ | 55990 |
| ಸಿಂಗಪುರ್ ಥೈಲ್ಯಾಂಡ್ ಮಲೇಶಿಯಾ | 8 | Q3 | 25 ಡಿಸೆಂ | ~~76990~~ | 71990 |
| ಸಿಂಗಪುರ್ ಥೈಲ್ಯಾಂಡ್ ಮಲೇಶಿಯಾ | 10 | Q4 | 24 ಡಿಸೆಂ | ~~80990~~ | 75990 |
| ಸಿಂಗಪುರ್ ಥೈಲ್ಯಾಂಡ್ಮಲೇಶಿಯಾ ಜೊತೆ ಸ್ಟಾರ್ ಕ್ರೂಸ್ | 8 | Z2 | 28 ಡಿಸೆಂ | | 78990 |

*Terms & Conditions Apply. Advt.

Above Tours are Ex-Bengaluru departures. (Z2 is Ex Mumbai) • www.kesari.in • SMS KESARI <space> your message to 56677 • Toll free 1800 22 1100